155ಸೆ೬ ಅ-72 = 109
4RR

# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿಸೋಜಾ ರವರು ಮಂಡಿಸಿರುವ ನಿಯಮ-72ರ ಸೂಚನೆಗೆ ಉತ್ತರ

**ಪ್ರಶ್ನೆ:** 2019 ಡಿಸೆಂಬರ್‌ನಲ್ಲಿ CAA/NRC ಅನುಷ್ಠಾನಗೊಳಿಸಬಾರದೆಂದು ಸಾರ್ವಜನಿಕ ಉದ್ದೇಶದಿಂಧ ಪ್ರತಿಭಟನೆ ನಡೆಸುತ್ತಿದ್ದ, ಸಂದರ್ಭದಲ್ಲಿ ಪೊಲೀಸ್ ಪ್ರತಿಭಟನೆ ಮಾಡದಂತೆ ತಡೆದಾಗ ಉಂಟಾಗಿರುವ ಘರ್ಷಣೆಯಲ್ಲಿ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಸುಮಾರು 20ಕ್ಕೂ ಅಧಿಕ ಪ್ರಕರಣ ದಾಖಲಾಗಿದ್ದು, ಈ ಘಟನೆಯು ಉದ್ದೇಶಪೂರ್ವಕವಾಗಿದ್ದು, ಸಾರ್ವಜನಿಕ ಉದ್ದೇಶದಿಂದ ನಡೆದ ಪ್ರತಿಭಟನೆಯಲ್ಲಿ ನಡೆದಿದ್ದು, CAA/NRC ಕಾನೂನು ಜಾರಿಗೆ ತಂದಲ್ಲಿ ಸಮಾಜದಲ್ಲಿ ಉಂಟಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಸಂಘಟಿಸಿರುವ ಪ್ರತಿಭಟನೆಯಾಗಿದ್ದು, ಇದು ಸಮಾಜದ ಹಿತಾಶಕ್ತಿಯುಳ್ಳ ಆಗಿರುವುದರಿಂದ ಇಂತಹ ಅನೇಕ ಕೇಸುಗಳ ಸರ್ಕಾರ ಹಿಂದಕ್ಕೆ ಪಡೆದಿದ್ದು, ಮಂಗಳೂರು ನಗರ ಪೊಲೋಸ್ ಕಮೀಶನರೇಟ್ ವ್ಯಾಪ್ತಿಯ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದಾಖಲಾದ ಕೇಸುಗಳನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಹಿಂದಕ್ಕೆ ಪಡೆಯಬೇಕು ಮತ್ತು ಇದರಲ್ಲಿ ಕೇಸು ದಾಖಲಾಗಿರುವ ಆರೋಪಿಗಳು ಅಮಾಯಕರು ಮಕ್ಕಳಾಗಿದ್ದು, ವಿದ್ಯಾಭ್ಯಾಸಕ್ಕೆ ಮುಂದಿನ ಭವಿಷ್ಯಕ್ಕೆ ತೊಂದರೆ ಉಂಟಾಗುತ್ತಿರುವ ಬಗ್ಗೆ.

**ಉತ್ತರ:** ದಿನಾಂಕ:19-12-2019 ರಂದು ಸಿಎಎ/ಎನ್‌ಆರ್‌ಸಿ ಕಾಯ್ದೆಯ ವಿರುದ್ಧ ಮಂಗಳೂರು ಕಮೀಶನರೇಟ್ ವ್ಯಾಪ್ತಿಯ ಸೆಂಟ್ರಲ್ ಉಪ ವಿಭಾಗದ ಸರಹದ್ದಿನಲ್ಲಿ ಅನುಮತಿ ಪಡೆದುಕೊಳ್ಳದೇ ಸಿಎಎ/ಎನ್‌ಆರ್‌ಸಿ ಕಾಯ್ದೆಯ ವಿರುದ್ಧ ಅಕ್ರಮ ಕೂಟವನ್ನು ಸೇರಿಕೊಂಡು ಪ್ರತಿಭಟನೆಯನ್ನು ನಡೆಸುತ್ತಿದ್ದು, ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದುದರಿಂದ ಪ್ರತಿಭಟನಾಕಾರರಿಗೆ ಅಲ್ಲಿಂದ ತೆರಳಲು ತಿಳಿಸಿದರೂ ಏಕಾ ಏಕಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ, ಕೊಲೆ ಯತ್ನ ಮಾಡಿ, ಗಲಭೆ ಮಾಡುತ್ತಿರುವವರನ್ನು ಕನಿಷ್ಠ ಬಲ ಪ್ರಯೋಗಿಸಿ ಚದುರಿಸಲಾಗಿದೆ. ಈ ಗಲಭೆಯ ಸಮಯ ಸಾರ್ವಜನಿಕ ಆಸ್ತಿಗಳಿಗೆ ಹಾನಿ ಹಾಗೂ ಪೊಲೀಸ್ ಅಧಿಕಾರಿ/ಸಿಬ್ಬಂಧಿಗಳಿಗೆ ಗಾಯಗಳಾಗಿರುತ್ತವೆ. ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯನ್ನುಂಟು ಮಾಡಿ, ಸಾರ್ವಜನಿಕ ಆಸ್ತಿ ಹಾನಿ ಮಾಡಿ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಏಕಾ ಏಕಿ ಕಲ್ಲು ತೂರಾಟ ನಡೆಸಿ, ಕೊಲೆ ಯತ್ನ ಮಾಡಿದ ಆರೋಪಿಗಳ ವಿರುದ್ಧ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಈ ಕೆಳಕಂಡಂತೆ ಪ್ರಕರಣಗಳು ದಾಖಲಾಗಿರುತ್ತವೆ.

| ಕ್ರ.ಸಂ. | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ ಮತ್ತು ಕಲಂ | ಪ್ರಕರಣದ ಪ್ರಸ್ತುತ ಹಂತ |
|---|---|---|---|
| 1. | ದಕ್ಷಿಣ | ಮೊ ನಂ 236/2019 ಕಲಂ 143, 147, 148, 353, 427 ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1002/20 ರಂತೆ ವಿಚಾರಣೆಯಲ್ಲಿದೆ. |
| 2. | ದಕ್ಷಿಣ | ಮೊ ನಂ 237/2019 ಕಲಂ 143, 147, 148, 353, 332, 333, 307, 427, 324, 326, 188, 427 ಜೊತೆಗೆ 149 ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1774/2023 ರಂತೆ ವಿಚಾರಣೆಯಲ್ಲಿದೆ. |
| 3. | ದಕ್ಷಿಣ | ಮೊ ನಂ 238/2019 ಕಲಂ 143, 147, 148, 323, 324, 353, 354, 332, 307, 188, 427, ಜೊತೆಗೆ 149 ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 2936/2021 ರಂತೆ ವಿಚಾರಣೆಯಲ್ಲಿದೆ. |
| 4. | ದಕ್ಷಿಣ | ಮೊ ನಂ 239/2019 ಕಲಂ 143, 147, 148, 324, 353, 332, 307, 188, 427, ಜೊತೆಗೆ 149 ಮತ್ತು ಕಲಂ | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1213/2023 ರಂತೆ |

| | | | |
|---|---|---|---|
| | | 2(ಎ) Karnataka Prevention Of Destruction & Loss Of Property Act | ವಿಚಾರಣೆಯಲ್ಲಿದೆ. |
| 5. | ದಕ್ಷಿಣ | ಮೊ ನಂ 240/2019 ಕಲಂ 143, 147, 148, 324, 353, 332, 307, 188, ಜೊತೆಗೆ 149 ಐಪಿಸಿ | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1352/2023 ರಂತೆ ವಿಚಾರಣೆಯಲ್ಲಿದೆ. |
| 6. | ದಕ್ಷಿಣ | ಮೊ ನಂ 241/2019 ಕಲಂ 143, 147, 148, 324, 353, 332, 307, 188, ಜೊತೆಗೆ 149 ಐಪಿಸಿ | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1370/2023 ರಂತೆ ವಿಚಾರಣೆಯಲ್ಲಿದೆ. |
| 7. | ದಕ್ಷಿಣ | ಮೊ ನಂ 242/2019 ಕಲಂ 143, 147, 148, 324, 353, 332, 307, 188, ಜೊತೆಗೆ 149 ಐಪಿಸಿ | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1772/2023ರಂತೆ ವಿಚಾರಣೆಯಲ್ಲಿದೆ. |
| 8. | ದಕ್ಷಿಣ | ಮೊ ನಂ 243/2019 ಕಲಂ 143, 147, 148, 324, 353, 332, 307, 188, 506 ಜೊತೆಗೆ 149 ಐಪಿಸಿ | ಮಾನ್ಯ ನ್ಯಾಯಾಲಯದ ಎಸ್.ಸಿ ನಂ. 153/2023 ರಂತೆ ವಿಚಾರಣೆಯಲ್ಲಿದೆ. |
| 9. | ದಕ್ಷಿಣ | ಮೊ ನಂ 244/2019 ಕಲಂ 143, 147, 148, 427, 307, 435, ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಎಸ್.ಸಿ. ನಂ. 159/2023 ರಂತೆ ವಿಚಾರಣೆಯಲ್ಲಿದೆ. |
| 10. | ದಕ್ಷಿಣ | ಮೊ ನಂ 245/2019 ಕಲಂ 143, 147, 148, 427, ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಎಸ್.ಸಿ. ನಂ. 1058/20 ರಂತೆ ವಿಚಾರಣೆಯಲ್ಲಿದೆ. |
| 11. | ದಕ್ಷಿಣ | ಮೊ ನಂ 246/2019 ಕಲಂ 143, 147, 148, 427, ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1058/20 ರಂತೆ ವಿಚಾರಣೆಯಲ್ಲಿದೆ. |
| 12. | ದಕ್ಷಿಣ | ಮೊ ನಂ 247/2019 ಕಲಂ 143, 147, 148, 427, 336 ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1131/2020 ರಂತೆ ವಿಚಾರಣೆಯಲ್ಲಿದೆ. |
| 13. | ದಕ್ಷಿಣ | ಮೊ ನಂ 248/2019 ಕಲಂ 143, 147, 148, 341, 268, 290, 427, 336 ಜೊತೆಗೆ 149 ಐಪಿಸಿ ಮತ್ತು ಕಲಂ 2(ಎ) Karnataka Prevention Of Destruction & Loss Of Property Act | ಮಾನ್ಯ ನ್ಯಾಯಾಲಯದ ಸಿ.ಸಿ. ನಂ. 1063/19 ರಂತೆ ವಿಚಾರಣೆಯಲ್ಲಿದೆ. |

ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಸ್ವೀಕೃತವಾಗುವ ಮನವಿಗಳಿಗೆ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಮತ್ತು ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಅಭಿಪ್ರಾಯ ಪಡೆಯಲಾಗುತ್ತದೆ. ನಂತರ, ಕಾನೂನು ಇಲಾಖೆಯಿಂದಲೂ ಅಭಿಪ್ರಾಯ ಪಡೆದು, ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಕುರಿತು ಪರಿಶೀಲಿಸಲು ರಚಿಸಿರುವ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಪರಿಶೀಲನೆಗೆ ಮಂಡಿಸಲಾಗುತ್ತದೆ. ಸಚಿವ ಸಂಪುಟದ ಉಪ ಸಮಿತಿಯು ಸಿಆರ್‌ಪಿಸಿ ಕಲಂ 321 ಅಡಿಯಲ್ಲಿ ಅಭಿಯೋಜನೆಯಿಂದ ಹಿಂಪಡೆಯಲು ಸೂಕ್ತವೆಂದು ಶಿಫಾರಸ್ಸು ಮಾಡಿದ ಪ್ರಕರಣಗಳನ್ನು ಸಚಿವ ಸಂಪುಟದ ನಿರ್ಣಯಕ್ಕಾಗಿ ಮಂಡಿಸಲಾಗುತ್ತದೆ. ಸಚಿವ ಸಂಪುಟದಲ್ಲಿ ಅಭಿಯೋಜನೆಯಿಂದ ಹಿಂಪಡೆಯಲು ಸೂಕ್ತವೆಂದು ಅನುಮೋದನೆ ನೀಡಿದ ಪ್ರಕರಣಗಳನ್ನು ಮಾತ್ರ ಅಭಿಯೋಜನೆಯಿಂದ ಹಿಂಪಡೆಯಲು ಮಾನ್ಯ

ನ್ಯಾಯಾಲಯಗಳಲ್ಲಿ ಅಗತ್ಯ ಅರ್ಜಿ ಸಲ್ಲಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶ ಹೊರಡಿಸಲಾಗುತ್ತದೆ.

ಈ ರೀತಿ ಹೊರಡಿಸಲಾಗುವ ಆದೇಶಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:699/2016 ಅಶ್ವಿನಿ ಕುಮಾರ್ ಉಪಾಧ್ಯಾಯ Vs ಕೇಂದ್ರ ಸರ್ಕಾರ ಹಾಗೂ ಇತರರು ಅರ್ಜಿಯಲ್ಲಿ ದಿನಾಂಕ:10.08.2021ರಲ್ಲಿ ನೀಡಿರುವ ಆದೇಶ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:12755/2020 ರ IA 1/2022ರ ಮಧ್ಯಂತರ ಅರ್ಜಿಯಲ್ಲಿನ ದಿನಾಂಕ:13.07.2022ರ ಆದೇಶಗಳಲ್ಲಿ ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ನಿರ್ದೇಶನಗಳನ್ನು ಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.

ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಪ್ರಸ್ತಾವನೆಯು ನಿಯಮಾನುಸಾರ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಹೆಚ್‌ಡಿ 21 ಎಸ್‌ಡಿಎನ್ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು